**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 01-07-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ-1 ರವರ ಪರ ಶ್ರೀ ಹೆಚ್ ಬಿ ಎನ್ ವಕೀಲರವರಿಂದಃ

ರೈಲ್ವೇ ಇಲಾಖೆಯಲ್ಲಿ ಡಿ-ಗ್ರೂಪ್ ನೌಕರನ್ನು ನೇಮಕಾತಿ ಮಾಡುವ ಅಧಿಕಾರಿಯು ಅಸ್ಸಿಸ್ಟೆಂಟ್ ಫರ್ಸನಲ್ ಆಫೀಸರ್ ಆಗಿರುತ್ತಾರೆ. ಡಿ-ಗ್ರೂಪ್ ನೌಕರರ ನೇಮಕಾತಿ ಆದೇಶವನ್ನು ಹೆಡ್ ಕ್ವಾರ್ಟರ್ಸ್ ಸೌತ ವೆಸ್ಟರ್ನ್ ರೈಲ್ವೇ ಹುಬ್ಬಳಿರವರಿಂದ ಬರುತ್ತದೆ. ಜಿ ಎಂ ರವರಿಗೂ ಕೂಡಾ ಡಿ-ಗ್ರೂಪ್ ನೌಕರರನ್ನು ನೇಮಕಾತಿ ಮಾಡುವ ಅಧಿಕಾರವಿರುತ್ತದೆ ಎಂದರೆ ಸಾಕ್ಷಿಯು 2012 ರ ಪೂರ್ವದಲ್ಲಿ ಸದರಿ ಡಿ-ಗ್ರೂಪ್ ನೌಕರನ್ನು ನೇಮಕಾತಿ ಮಾಡಲು ಜಿ ಎಂ ರವರಿಗೆ ವಿವೇಚನಾಧಿಕಾರಿವಿದ್ದು ಆದರೆ ಪ್ರಸ್ತುತ ಇಲ್ಲ ಎನ್ನುತ್ತಾರೆ. 2012 ರ ಪೂರ್ವದಲ್ಲಿ ಮಾತ್ರ ಅಧಿಕಾರವಿತ್ತು ಎಂದು ತೋರಿಸಲು ನನಗೆ ಮಾಹಿತಿ ಇಲ್ಲ. ಮದ್ದೂರಿನ ಸ್ಟೇಷನ್ ಮಾಸ್ಟರ್ ರವರಿಂದ ಡಿವಿಷನ್ ಬ್ರಾಂಚ್ ನ ಟ್ರಾಫಿಕ್ ಇನ್ಸ್-ಪೆಕ್ಟರ್ ರವರಿಗೆ ನೇಮಕಾತಿಯ ಆದೇಶದ ಬಗ್ಗೆ ಮಾಹಿತಿಯನ್ನು ಕಳುಹಿಸಿದ್ದು ಸದರಿ ಟ್ರಾಫಿಕ್ ಇನ್ಸ್-ಪೆಕ್ಟರ್ ಮಾಹಿತಿ ನೀಡಿರುತ್ತಾರೆ. ಸದರಿ ಮಾಹಿತಿಯು ದಿಃ18-05-2015 ರಂದು ಮಧ್ಯಾಹ್ನ ವೇಳೆಗೆ ಬಂದಿರುತ್ತದೆ. ಸದರಿ ಟ್ರಾಫಿಕ್ ಇನ್ಸ್-ಪೆಕ್ಟರ್ ನನಗೆ ವೈಯಕ್ತಿಕವಾಗಿ ಮಾಹಿತಿ ನೀಡಿದ್ದು ಸದರಿಯವರು ಕೂಡಾ ನನ್ನ ಕಚೇರಿಯ ಸಿಬ್ಬಂದಿಯಾಗಿರುತ್ತಾರೆ. ಸದರಿಯವರು ನೇಮಕಾತಿ ಆದೇಶದ ಒಂದು ಪ್ರತಿಯನ್ನು ನನಗೆ ತೋರಿಸಿದ್ದರು. ಸದರಿ ಪ್ರತಿಯನ್ನು ಟ್ರಾಫಿಕ್ ಇನ್ಸ್-ಪೆಕ್ಟರ್ ರವರು ಮದ್ದೂರಿನ ಸ್ಟೇಷನ್ ಮಾಸ್ಟರ್ ರವರಿಂದ ಅದೇ ದಿನ ಪಡೆದಿದ್ದರು. ಸದರಿ ನೇಮಕಾತಿ ಆದೇಶದ ಪ್ರತಿಯನ್ನು ನೋಡುವ ಪೂರ್ವದಲ್ಲಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ದಿಃ18-

02-2015 ರ ಪೂರ್ವದಲ್ಲಿ ಯಾವುದೇ ಮಾಹಿತಿ ಇತ್ತೇ ಎಂದು ಪ್ರಶ್ನಿಸಿದರೆ ಸಾಕ್ಷಿಯು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶದ ಪ್ರತಿಯನ್ನು ಟ್ರಾಫಿಕ್ ಇನ್ಸ್-ಪೆಕ್ಟರ್ ನನಗೆ ನೀಡುವ ಪೂರ್ವದಲ್ಲಿ ಸ್ಟೇಷನ್ ಮಾಸ್ಟರ್ ನನಗೆ ಯಾವುದೇ ನೇಮಕಾತಿಯ ಆದೇಶದ ಪ್ರತಿಯನ್ನು ಕಳುಹಿಸಿರಲಿಲ್ಲ. ನಂತರವೂ ಕೂಡಾ ಸ್ಟೇಷನ್ ಮಾಸ್ಟರ್ ನನಗೆ ಯಾವುದೇ ನೇಮಕಾತಿ ಆದೇಶದ ಪ್ರತಿಯನ್ನು ಕಳುಹಿಸಿಲ್ಲ. ಸದರಿ ನೇಮಕಾತಿಯ ಆದೇಶದ ಪ್ರತಿಯನ್ನು ಯಾರೂ ತಯಾರಿಸಿದ್ದಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿಯು ಸೃಷ್ಟಿತವಾಗಿದೆ ಎನ್ನುತ್ತಾರೆ. ನನಗೆ ಸದರಿ ಮಾಹಿತಿ ಬಂದ ನಂತರ ನನ್ನ ಮೇಲಾಧಿಕಾರಿಯಾದ ಸೀನಿಯರ್ ಡಿವಿಷನ್ ಪರ್ಸನಲ್ ಆಫೀಸರ್ ರವರಿಗೆ ಮಾಹಿತಿಯನ್ನು ನೀಡಿದ್ದು ಪೊಲೀಸ್ ದೂರು ದಾಖಲಿಸಲು ನಿರ್ಧರಿಸಿದ್ದೆವು, ಸದರಿ ದೂರು ದಾಖಲಿಸಲು ನನ್ನ ಮೇಲಾಧಿಕಾರಿಯು ನನಗೆ ಹೇಳಿದ್ದರು ಸದರಿ ದೂರನ್ನು ಅದೇ ದಿನ ನೀಡಿರುತ್ತೇವೆ. ಅದೇ ದಿನ ನಾನು ಮದ್ದೂರು ಠಾಣೆಗೆ ಬಂದಿರಲಿಲ್ಲ ನನಗೆ ಯಾವಾ ಠಾಣೆಗೆ ದೂರು ದಾಖಲಿಸಬೇಕು ಎಂದು ತಿಳಿದಿರಲಿಲ್ಲ ಆದರೆ ಅದೇ ವಾರದಲ್ಲಿ ಅಂದರೆ 18-27 ರ ಒಳಗೆ ಬಂದು ಯಾವಾ ಠಾಣೆಯಲ್ಲಿ ದೂರು ದಾಖಲಿಸಬೇಕೆಂದು ವಿಚಾರಿಸಿರುತ್ತೇನೆ. ನಾನು ಮೊದಲಿಗೆ ಚಿಕ್ಕಪೇಟೆ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದು ಆದರೆ ನನಗೆ ಮದ್ದೂರು ಠಾಣೆಗೆ ದೂರು ದಾಖಲಿಸಬೇಕೆಂದು ತಿಳಿದಿರಲಿಲ್ಲ ಸದರಿ ದೂರನ್ನು 2-3 ದಿನದಲ್ಲಿ ದಾಖಲಿಸಲು ಹೋಗಿರಬಹುದು. ನಾನು ಸದರಿ ಠಾಣೆಗೆ ಹೋಗಿದ್ದಾಗ, ದೂರನ್ನು ತೆಗೆದುಕೊಂಡು ಹೋಗಿರಲಿಲ್ಲ ಕೇವಲ ವಿಚಾರಣೆ ಮಾಡಲು ಹೋಗಿದ್ದೆ. ನಾನು ಠಾಣೆಯಲ್ಲಿ ಯಾರನ್ನು ಭೇಟಿ ಮಾಡಿದ್ದೆ ಎಂದು ಸದರಿಯವರ ಹುದ್ದೆ ಯ ಬಗ್ಗೆ ನನಗೆ ಗೊತ್ತಿಲ್ಲ. ಸದರಿಯವರು ಘಟನೆಯು ಮೈಸೂರು ರೈಲ್ವೇ ವಲಯದ ವ್ಯಾಪ್ತಿಗೆ

ಬರುವುದರಿಂದ ಅಲ್ಲಿ ದೂರು ದಾಖಲಿಸುವಂತೆ ಹೇಳಿದ್ದರು. ನಾನು ಮೈಸೂರಿಗೆ ದೂರು ದಾಖಲಿಸಲು ದಿಃ27-02-2015 ರಂದು ಹೋಗಿರುತ್ತೇನೆ. ನಾನು ಬೆಂಗಳೂರು ರೈಲ್ವೇ ವಲಯದ ಚಿಕ್ಕಪೇಟೆ ಠಾಣೆ ಮತ್ತು ಮೈಸೂರು ರೈಲ್ವೇ ವಲಯದ ಠಾಣೆ ಹಾಗೂ ಮದ್ದೂರು ಠಾಣೆಯನ್ನು ಭೇಟಿ ಮಾಡಿದ್ದು ಉಳಿದ ಠಾಣೆಯ ಬಗ್ಗೆ ನೆನಪಿಲ್ಲ. ದೂರು ದಾಖಲಿಸುವ ದಿನದಂದು ಮದ್ದೂರಿನ ಸ್ಟೇಷನ್ ಮಾಸ್ಟರ್ ನ್ನು ಭೇಟಿ ಮಾಡಿದ್ದು ಅದಕ್ಕೂ ಪೂರ್ವದಲ್ಲಿ ವೈಯಕ್ತಿಕವಾಗಿ ಭೇಟಿ ಮಾಡಿರುವುದಿಲ್ಲ. ದೂರನ್ನು ನಾನು ಮತ್ತು ಮದ್ದೂರಿನ ಸ್ಟೇಷನ್ ಮಾಸ್ಟರಾದ ಚಾಸಾ-2 ರವರು ಜಂಟಿಯಾಗಿ ನೀಡಿರುತ್ತೇವೆ. ಸದರಿಯವರನ್ನು ನಾನು ಎಲ್ಲಿ ಭೇಟಿ ಮಾಡಿದ್ದೆ ಎಂದು ನೆನಪಿಲ್ಲ. ನಾನು ಚಾಸಾ-2 ರವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿದ್ದೇನೋ ಅಥವಾ ಅಲ್ಲಿಯೇ ಭೇಟಿ ಮಾಡಿದ್ದೇನೋ ಎಂದು ನೆನಪಿಲ್ಲ. ದೂರನ್ನು ಬೆಂಗಳೂರಿನ ನಮ್ಮ ಕಚೇರಿಯಲ್ಲಿ ತಯಾರಿಸಿರುತ್ತೇವೆ. ಯಾವಾ ದಿನಾಂಕದಂದು ತಯಾರಿಸಿದ್ದೇವೆಂದು ನೆನಪಿಲ್ಲ. ನನ್ನ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ದೂರನ್ನು ತಯಾರಿಸಿದ್ದೇನೆ. ಸದರಿ ದೂರಿಗೆ ಚಾಸಾ-2 ರವರು ಯಾವಾಗ ಸಹಿ ಮಾಡಿದ್ದಾರೆಂದು ನೆನಪಿಲ್ಲ. ಆದರೆ ಒಟ್ಟಿಗೆ ಸಹಿ ಮಾಡಿರುತ್ತೇವೆ. ದೂರು ದಾಖಲಿಸುವ ಪೂರ್ವದಲ್ಲಿ ಚಾಸಾ-2 ರವರಿಗೆ ದೂರಿನ ಪ್ರತಿ ಕಳುಹಿಸಿರಲಿಲ್ಲ. ಸಾಕ್ಷಿ ಮುಂದುವರೆದು ಆದರೆ ದೂರು ದಾಖಲಿಸುವಾಗ ನೋಡಿರುತ್ತಾರೆ ಎನ್ನುತ್ತಾರೆ. ಯಾವಾ ಸ್ಥಳದಲ್ಲಿ ದೂರಿಗೆ ನಾನು ಸಹಿ ಮಾಡಿದ್ದೇನೆಂದು ನೆನಪಿಲ್ಲ. ಚಾಸಾ-2 ರವರು ಯಾವಾ ಸ್ಥಳದಲ್ಲಿ ಸಹಿ ಮಾಡಿದ್ದಾರೆಂದು ನೆನಪಿಲ್ಲ. ನಿಪಿ-1 ರಲ್ಲಿ ದಿನಾಂಕವನ್ನು 21-02-2015 ಎಂಬ ದಿನಾಂಕವನ್ನು 27-02-2015 ಎಂದು ತಿದ್ದಲಾಗಿದೆ ಎಂದರೆ ಸರಿ. ಸದರಿ ದೂರು 21-02-2015 ರಂದೇ ತಯಾರಿಸಲಾಗಿತ್ತು

ಎಂದರೆ ಸರಿ. ಅದೇ ದಿನ ದೂರು ದಾಖಲಿಸಲು ತೊಂದರೆಯಿತ್ತೇ ಎಂದರೆ ಸಾಕ್ಷಿಯು ಆ ಬಗ್ಗೆ ಮಾಹಿತಿ ರವಾನೆ(correspondence)ಮಾಡಬೇಕಾಗಿತ್ತು ಎನ್ನುತ್ತಾರೆ. ಸದರಿ ದೂರನ್ನು ದಾಖಲಿಸಲು ಯಾರೊಂದಿಗೆ correspondence ಮಾಡಿದ್ದೀರೀ ಎಂದರೆ ಸಾಕ್ಷಿಯು ಠಾಣೆಗಳನ್ನು ಪರಿಶೀಲನೆ ಮಾಡಲು 1 ವಾರ ಬೇಕಾಯಿತು ಎನ್ನುತ್ತಾರೆ. ಸದರಿ correspondence ನ್ನು ಯಾವಾ ಠಾಣೆಗಳೊಂದಿಗೆ ಮಾಡಿದ್ದೀರೀ ಎಂದರೆ ಸಾಕ್ಷಿಯು ಮೈಸೂರು ವಲಯದ ಠಾಣೆಯಿರಬಹುದು ಎನ್ನುತ್ತಾರೆ. ನಿರ್ದಿಷ್ಟವಾಗಿ ಠಾಣೆಯನ್ನು ಹೇಳಲು ಸಾಧ್ಯವೇ ಎಂದರೆ ಸಾಕ್ಷಿಯು ಬೆಂಗಳೂರು ವಲಯ, ಮೈಸೂರು ವಲಯ ಮತ್ತು ಮದ್ದೂರು ವಲಯದ ಠಾಣೆಗಳನ್ನು ವಿಚಾರಿಸಿದ್ದೇನೆ ಎನ್ನುತ್ತಾರೆ. ನಿಪಿ-1 ನ್ನು ಹೊರತುಪಡಿಸಿ ಬೇರೆ ಯಾವುದೇ ದೂರನ್ನು ತಯಾರಿಸಿಲ್ಲ. ನಾನು ನೀಡಿದ ದೂರಿನಲ್ಲಿ ಯಾವುದೇ ತಿದ್ದುಪಡಿಗಳನ್ನು ಠಾಣೆಯಲ್ಲಿ ಮಾಡಿಲ್ಲ. ದಿಃ21-02-2015 ರಂದು ದುಾರು ದಾಖಲಿಸಿದ ನಂತರ ನಾನು ಮತ್ತು ನನ್ನ ಸಿಬ್ಬಂದಿಗಳು ಯಾವಾ ಠಾಣೆಯಲ್ಲಿ ದೂರು ದಾಖಲಿಸಬೇಕೆಂದು ಮತ್ತು ಯಾವಾ ಕ್ರಮದಲ್ಲಿ ದೂರು ದಾಖಲಿಸಬೇಕೆಂದು ಪರಿಶೀಲನೆ ಮಾಡುತ್ತಿದ್ದೆವು. ನಿಪಿ-1 ರ ದೂರನ್ನು 27-02-2015 ರಂದು ದಾಖಲಿಸುವ ಪೂರ್ವದಲ್ಲಿ ಮೈಸೂರು ವಲಯದ ಠಾಣೆಗೆ ತೋರಿಸಿದ್ದೇನೋ ಇಲ್ಲವೋ ಎಂದು ನೆನಪಿಲ್ಲ. ಸದರಿ ದೂರನ್ನು ದಾಖಲಿಸಲು ನನಗೆ ಮೇಲಾಧಿಕಾರಿಯಿಂದ ಯಾವುದೇ ಆದೇಶ ಇಲ್ಲ. ಸಾಕ್ಷಿ ಮುಂದುವರೆದು ನಾನು ದೂರು ದಾಖಲಿಸಲು ಸಕ್ಷಮ ಅಧಿಕಾರಿಯಾಗಿದ್ದೇನೆ ಎನ್ನುತ್ತಾರೆ. ಪೊಲೀಸನವರು ನಾನು ಸಕ್ಷಮ ಅಧಿಕಾರಿ ಎಂದು ತೋರಿಸಲು ದೂರಿನೊಂದಿಗೆ ಯಾವುದೇ ದಾಖಲೆ ಪಡೆದುಕೊಂಡಿಲ್ಲ. ಸ್ಟೇಷನ್ ಮಾಸ್ಟರ್ ಗೆ ದೂರು ದಾಖಲಿಸಲು ಅಧಿಕಾರವಿದೆ ಎಂದರೆ ಸದರಿ ಸ್ಟೇಷನ್ ಮಾಸ್ಟರ್

ರವರು ಸದರಿ ನೇಮಕಾತಿಯ ಆದೇಶದ ಪ್ರತಿಯನ್ನು ಕಳುಹಿಸಲು ಪಾತ್ರವಹಿಸಿದ್ದರಿಂದ ಸದರಿಯವರು ಕೂಡಾ ಜಂಟಿಯಾಗಿ ಪಾತ್ರವಹಿಸಿದ್ದಾರೆ ಎನ್ನುತ್ತಾರೆ. ನಾನಾಗಲೀ, ಚಾಸಾ-2 ರವರಾಗಲೀ ದೂರು ದಾಖಲಿಸಲು ಅಧಿಕಾರ ಹೊಂದಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ನಾನು, ಚಾಸಾ-2 ಮತ್ತು ನನ್ನ ಮೇಲಾಧಿಕಾರಿಗಳು ಸೇರಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಬೆಳಗಿನ ಕಲಾಪ ಅವಧಿ ಮುಗಿದಿದ್ದರಿಂದ ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು

ದಿಃ 01-07-2025 ರಂದು ಸಾಕ್ಷಿಯನ್ನು ಮಧ್ಯಾಹ್ನ 03-10 ಕ್ಕೆ ಪುನಃ ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ-1 ರವರ ಪರ ಶ್ರೀ ಹೆಚ್ ಬಿ ಎನ್ ವಕೀಲರವರಿಂದಃ

ನಾನು ಸದರಿ ಪ್ರಕರಣದ ಮಾಹಿತಿಯನ್ನು ನನ್ನ ಸೀನಿಯರ್ ಡಿವಿಷನ್ ಪರ್ಸನಲ್ ಆಫೀಸರ್ ರಾದ ಸುವರ್ಣ ದೇಶಪಾಂಡೆ ರವರಿಗೆ ತಿಳಿಸಿದ್ದೆ ಮತ್ತು ಡಿವಿಷನ್ ಪರ್ಸನಲ್ ಆಫೀಸರ್ ರವರೊಂದಿಗೆ ಚರ್ಚಿಸಿದ್ದೇನೆ. ನಾನು ಮದ್ದೂರಿನ ಸ್ಟೇಷನ್ ಮಾಸ್ಟರ್ ರೊಂದಿಗೆ ಚರ್ಚೆ ಮಾಡಿದ್ದೇನೆ. ಜಂಟಿಯಾಗಿ ದೂರು ನೀಡಲು ಯಾರು ಹೇಳಿದ್ದರು ಎಂದರೆ ಸಾಕ್ಷಿಯು ನನ್ನ ಮೇಲಾಧಿಕಾರಿಗಳು ಹೇಳಿದ್ದು ಸದರಿಯು ಸರ್ಕಾರದ ನಿಯಮವಾಗಿರುತ್ತದೆ. ಸದರಿಯು ಯಾವಾ ಮೇಲಾಧಿಕಾರಿಯ ಹೇಳಿಕೆಯ ಮೇಲೆ ದೂರು ದಾಖಲಿಸಿದ್ದೀರಾ ಎಂದು ಪ್ರಶ್ನಿಸಿದ್ದು ಸದರಿಯು ಊರ್ಜಿತವಲ್ಲ ಎಂದು ತಿರಸ್ಕರಿಸಲಾಗಿದೆ. ಆರೋಪಿ-1 ರವರು ಯಾವುದೇ ತಪ್ಪು ಮಾಡದೇ ಇದ್ದರೂ ಸದರಿಯವರ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆಂದರೆ ಸರಿಯಲ್ಲ. 2 ನೇ ಆರೋಪಿ ಪರ ವಕೀಲರು ಆರೋಪಿ-1 ರ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಂಡಿದ್ದು ಮುಂದುವರೆದ ಪಾಟೀ ಸವಾಲುಃ ಆರೋಪಿ--2 ರವರ ಪರ ಶ್ರೀ ಪ್ರಭಾಕರ್ ವಕೀಲರವರಿಂದಃ

ಕರ್ನಾಟಕದಲ್ಲಿ ಜೋನಲ್ ಹೆಡ್ ಕ್ವಾರ್ಟರ್ಸ್ ಹುಬ್ಬಳ್ಳಿಯಲ್ಲಿದ್ದು ಡಿವಿಷನ್ ಹೆಡ್ ಕ್ವಾರ್ಟರ್ಸ್ ಬೆಂಗಳೂರು, ಹುಬ್ಬಳ್ಳಿಯಲ್ಲಿದೆ. ಸಾಮಾನ್ಯವಾಗಿ ಡಿ-ಗ್ರೂಪ್ ಆರ್ ಸಿ ಸಿ ಯಿಂದ ನೇಮಕಾತಿಯ ಆದೇಶವಾಗಿದ್ದಲ್ಲಿ ಅದರಂತೆ ನೇಮಕಾತಿ ಮಾಡಿ ಹೆಡ್ ಕ್ವಾರ್ಟರ್ಸ್ ಹುಬ್ಬಳ್ಳಿಗೆ ನೇಮಕಾತಿ ಆದೇಶ ಕಳುಹಿಸಿಕೊಡಲಾಗುತ್ತದೆ. ಅದನ್ನು ಹೊರತುಪಡಿಸಿ ಬೇರೆ ರೀತಿಯಲ್ಲಿ ನೇಮಕಾತಿ ಮಾಡುವುದಿಲ್ಲ. ಸಾಕ್ಷಿ ಮುಂದುವರೆದು ಅನುಕಂಪ ಆಧಾರದ ನೇಮಕಾತಿಯನ್ನು ಹೊರತುಪಡಿಸಲಾಗಿದೆ ಎನ್ನುತ್ತಾರೆ. ನಿಪಿ-2 ರಲ್ಲಿರುವ ಸೀಲ್ ನನ್ನ ಹುದ್ದೆದ್ದಾಗಿದೆ. ಸದರಿ ಸೀಲಿನ ಕಸ್ಟೋಡೋಯಿನ್ ಆಫೀಸರ್ ಸೂಪರ್ ಡೆಂಟ್ ಮತ್ತು ಬಿಲ್ ಕರ್ಕ್ ಆಗಿರುತ್ತಾರೆ. ಆದರೆ ನನಗೆ ಸದರಿಯವರ ಹೆಸರು ನೆನಪಿಲ್ಲ. ಸದರಿ ಸೀಲಿನ ಕಸ್ಟಡಿಯು ನನ್ನ ಬಳಿ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-2 ರಂತೆ 8 ಜನ ಡಿ-ಗ್ರೂಪ್ ಸಿಬ್ಬಂದಿಯಾಗಿ ಆಯ್ಕೆಯಾಗಿರುತ್ತಾರೆ. ನಾನು ಸದರಿ 8 ಜನರ ವಿರುದ್ಧ ದೂರನ್ನು ದಾಖಲಿಸಿಲ್ಲ. ಸಾಕ್ಷಿ ಮುಂದುವರೆದು ಪರಿಶೀಲನೆ

ಮಾಡಿದಾಗ 8 ಜನರು ಕೂಡಾ ಕರ್ತವ್ಯಕ್ಕೆ ಸೇರಿಲ್ಲವೆಂದು ತಿಳಿದುಬಂದಿದ್ದರಿಂದ ಸದರಿಯವರ ಹೆಸರನ್ನು ಸೇರಿಸಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸದರಿ 8 ಜನರಲ್ಲಿ ಆರೋಪಿ-1 ರವರನ್ನು ಮಾತ್ರ ಸೇರಿಸಲಾಗಿದೆ ಎನ್ನುತ್ತಾರೆ. ಸದರಿ 8 ಜನರ ಹೆಸರು ಮತ್ತು ವಿಳಾಸ ಗೊತ್ತು ಎಂದರೆ ಸರಿಯಲ್ಲ. ನಾನು ದೂರು ದಾಖಲಿಸಲು ಸಕ್ಷಮ ಅಧಿಕಾರಿ ಅಲ್ಲ ಎಂದರೆ ಸರಿಯಲ್ಲ. ಯಾವುದೇ ಡಿ-ಗ್ರೂಪ್ ಸಿಬ್ಬಂದಿಗಳನ್ನು ಜಿ ಎಂ ರವರು ಮಾತ್ರ ನೇಮಕಾತಿ ಮಾಡುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎ ಪಿ ಓ ರವರು ನೇಮಕಾತಿ ಅಧಿಕಾರ ಹೊಂದಿದ್ದಾರೆ ಎನ್ನುತ್ತಾರೆ. ದೂರನ್ನು ಹೊರತುಪಡಿಸಿ ನನ್ನಿಂದ ಪೊಲೀಸರು ಕೆಲವು ದಾಖಲಾತಿಗಳನ್ನು ಪಡೆದುಕೊಂಡಿದ್ದು ಆದರೆ ಅವುಗಳು ಯಾವುದೆಂದು ನೆನಪಿಲ್ಲ. ನನಗೆ ಪ್ರಕರಣದ ಬಗ್ಗೆ ನಿಖರ ಮಾಹಿತಿ ಇಲ್ಲದಿದ್ದರೂ ಬೇರೆಯವರ ಮಾಹಿತಿ ಆಧಾರದ ಮೇಲೆ ಸುಳ್ಳು ದೂರು ದಾಖಲಿಸಿದ್ದೇನೆಂದರೆ ಸರಿಯಲ್ಲ. ಆರೋಪಿ-4 ರವರ ಪರ ವಕೀಲರು ಆರೋಪಿ-1 ಮತ್ತು 2 ರವರ ಪರ ವಕೀಲರು ಮಾಡಿದ ಪಾಟೀಸವಾಲನ್ನು ಯಥವತ್ತಾಗಿ ಅಳವಡಿಸಿಕೊಂಡಿದ್ದಾರೆ.

**ಮರುವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು